AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಕನ್ನಡ ಸಾಹಿತ್ಯಕ್ಕೆ ದಾಸರ ಕೊಡುಗೆ

**ಡಾ. ಅಶ್ವಿನಿ ಬೆಳ್ಳುಂಡಗಿ**
ಉಪನ್ಯಾಸಕರು
ಕೃಷಿ ಮಹಾವಿದ್ಯಾಲಯ ವಿಜಯಪುರ
ಮೊ: 8296628248
Email Id : asbellundagi@gmail.com

ಶಿವಶರಣ ಹಾಗೂ ಹರಿದಾಸ ಈ ಎರಡು ಜನಮುಖಿ ಆಂದೋಲನಗಳು ಮಧ್ಯಕಾಲಿನ ಕರ್ನಾಟಕ ಸಂಸ್ಕೃತಿ, ಇತಿಹಾಸ ಅನೇಕ ದೃಷ್ಟಿಯಿಂದ ಮಹತ್ವಪೂರ್ಣ ಕುತೂಹಲಕಾರಿಯೂ ಆದದ್ದು. ರಾಜಕೀಯ, ಧಾರ್ಮಿಕ ಜೀವನದ ಏರಿಳಿತಗಳ ಪರಿಣಾಮವು ಸಾಮಾಜಿಕ ಜೀವನದ ಮೇಲೂ ಪ್ರಭಾವ ಬೀರಿ ಸಾಹಿತ್ಯದಲ್ಲಿ ಅದರ ಪ್ರತಿಬಿಂಬ ಗೋಚರಿಸಿದೆ. ಈ ಸಮಯದಲ್ಲಿ ಎರಡು ಸರ್ವೋದಯ ಚಳುವಳಿಗಳು ಕಣ್ಣಿಗೆ ಬೀಳುತ್ತವೆ. ಒಂದು ಶಿವಶರಣರ ಕ್ರಾಂತಿಕಾರಕ ಆಂದೋಲನವು 12 ನೇ ಶತಮಾನದಲ್ಲಿ ಎದ್ದು ಕಾಣುವಂಥದ್ದು. ಶಿವಶರಣರ ಈ ವಚನ ಸಾಹಿತ್ಯಕ್ಕೆ ವೀರಶೈವ ಧರ್ಮ ಹಿನ್ನೆಲೆಯಾದರೆ ಇನ್ನೊಂದು ಹರಿದಾಸ ಕೀರ್ತನ ಸಾಹಿತ್ಯಕ್ಕೆ ಮಧ್ವಾಚಾರ್ಯರ ದ್ವೈತಸಿದ್ಧಾಂತ ಹಿನ್ನೆಲೆಯಾಗಿದೆ. ವೇದೋಪನಿಷತ್ತುಗಳಲ್ಲಿನ ಗಹನ ತತ್ವಗಳನ್ನು ಆಧ್ಯಾತ್ಮ ರಹಸ್ಯಗಳನ್ನು ಸರಳ ಸುಲಭ ರೀತಿಯಲ್ಲಿ ಜನಸಾಮಾನ್ಯರಿಗೆ ದಾಸರು ಅನಾವರಣಗೊಳಿಸಿದರು.

ಹರಿದಾಸರ ಕೀರ್ತನೆಗಳು ಸಾಹಿತ್ಯ ರಚನೆಯ ಉದ್ದೇಶದಿಂದ ರಚನೆಯಾದವುಗಳಲ್ಲ ಅವೆಲ್ಲಾ ದೈನಂದಿನ ಆಗು ಹೋಗುಗಳಿಗೆ ತೋರಿಸಿದ ಪ್ರತಿಕ್ರಿಯೆಗಳು ಹಾಗೂ ಆಶುಕವಿತೆಗಳಾಗಿವೆ. ಭಕ್ತಿಯ ಮೂಲಕ ಮುಕ್ತಿಯನ್ನು ಸೂರೆಗೊಳ್ಳಬೇಕೆಂದು ಮುಖ್ಯವಾಗಿ ಬಯಸಿದ ಹರಿದಾಸರು ತಮ್ಮನ್ನು ಮತ್ತು ತಮ್ಮ ಸುತ್ತಮುತ್ತಲಿನ ಸಮಾಜವನ್ನು ಅರಿತುಕೊಳ್ಳಲು ಹಾಗೂ ಸುಧಾ–ರಿಸಲು ಮಾಡಿದ ಪ್ರಾಮಾಣಿಕ ಪ್ರಯತ್ನಗಳೇ ಹರಿದಾಸ ಸಾಹಿತ್ಯದಲ್ಲಿ ಕಂಡುಬರುತ್ತದೆ. ದಾಸ ಸಾಹಿತ್ಯವು ಕೀರ್ತನೆ, ಸೂಳಾದಿ, ಉಗಾಭೋಗ, ವೃತ್ತ, ತ್ರಿಪದಿ, ದಂಡಿಕ, ಷಟ್ಪದಿ, ಛಂದಸ್ಸು ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ರಚಿತವಾಗಿವೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಸ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಶ್ರೀಪಾದರಾಜರಿಂದ ಆರಂಭವಾದ ಈ ಸಾಹಿತ್ಯವು ಪುರಂದರದಾಸ, ಕನಕದಾಸರಿಂದ ಉತ್ಕೃಷ್ಟ ಪ್ರಕಾರವಾಗಿ ಬೆಳೆದು ಬಂದಿದೆ. ಇದು ಜನಾಭಿಮುಖವಾಗಿ ಹರಡಿಕೊಂಡ ವಾಕ್ ಪರಂಪರೆಯ ಕಡೆಗೆ ಚಲಿಸಿರುವುದು ಈ ಸಾಹಿತ್ಯದ ವೈಶಿಷ್ಟ್ಯಗಳಲ್ಲೊಂದು. ದಾಸರು ಮಾತಿಗೆ ಸಂಗೀತದ ಸ್ಪರ್ಶವನ್ನು ತಂದರು. ಈ ಆಂದೋಲನಗಳು ನಮಗಿಂದು ಮುಖ್ಯವೆನಿಸುವುದು ಅವು ರೂಪಿಸಿದ ಭಕ್ತಿಯ ತಾತ್ವಿಕತೆಗಾಗಿ ಅಷ್ಟೆ ಅಲ್ಲ ಅವು ಪ್ರತಿಬಿಂಬಿಸುವ ಸಮಾಜಮುಖಿ ಚಿಂತನೆಗಳಿಗೆ ಅವರಿಗೆ ಭಕ್ತಿಯ ಪ್ರತಿಪಾದನೆಯಷ್ಟೇ ಗುರಿಯಾಗಿರಲಿಲ್ಲ. ಕೀರ್ತನೆಗಳಲ್ಲಿ ಭಕ್ತಿ, ನ್ಯಾಯ, ನೀತಿ, ನಡತೆ, ಸಹನೆ, ದಾನ,ಧರ್ಮ, ಜ್ಞಾನದ ಹಸಿವು, ಧೈರ್ಯವಂತಿಕೆ, ವಿನಯತೆ ಮುಂತಾದ ಮಾನವೀಯ ಮೌಲ್ಯಗಳನ್ನು ನಾವು ಅವರ ಕೀರ್ತನೆಗಳಲ್ಲಿ ಕಾಣಬಹುದು.

ಹರಿದಾಸರು ತಮ್ಮ ಸುತ್ತಲಿನ ಬದುಕನ್ನು ಹಸನಾಗಿಸುವ ಕಾಳಜಿ ಅವರದಾಗಿತ್ತು. ಅಂತಹ ಜೀವನಮೌಲ್ಯಗಳನ್ನು ಹಾಡಿನಲ್ಲಿ ಬೆಸೆದು ಊರೂರಿಗೆ ವಿತರಿಸಿದರು. ದಾಸರು ಗೆಜ್ಜೆ ಕಟ್ಟಿ, ತಾಳ ಕಟ್ಟಿ ಕುಣಿ ಕುಣಿಯುತ್ತಾ ಮಧುಕರ ವೃತ್ತಿಯನ್ನು ಅನುಸರಿಸಿ ಜನರನ್ನು ಎಚ್ಚರಿಸಿದರು. ಹೀಗೆ ಧರ್ಮ ಪ್ರಚಾರ ಮತ್ತು ಸಮಾಜ ಸುಧಾರಣೆಯ ಕಾಯಕಕ್ಕಾಗಿ ಇಡೀ ಬದುಕನ್ನು ಅರ್ಪಿಸಿಕೊಂಡ ಇಲ್ಲಿನ ಪರಿಗ್ರಹಿಕ ದೈವಕೇಂದ್ರಿತವಾಗಿಯೂ ಮಾನವಪರವಾಗಿರುವುದನ್ನು ಗಮನಿಸಬೇಕು.

ದಾಸರು ಬದುಕಿದ್ದ ವ್ಯವಸ್ಥೆಯನ್ನು ಒಪ್ಪಿಕೊಂಡವರಲ್ಲ ಅಂಥ ಕಂದಾಚಾರದ ವೈದಿಕರನ್ನು ಲೇವಡಿ ಮಾಡಿದ್ದಾರೆ. 'ಹೊಲೆಯ ಹೊರಗಿಹನೆ, ಊರೊಳಗಿಲ್ಲವೆ' ಎಂದು ಪ್ರಶ್ನಿಸಿದರು. 'ಕುಲ ಕುಲವೆಂದು ಹೊಡೆದಾಡದಿರಿ' ಎಂದು ಎಚ್ಚರಿಸಿದರು. ಸಂಸಾರದ ಅಸಾರತೆಯನ್ನು ಹೇಳಿದರು ಅದನ್ನು ಬಿಟ್ಟೋಡುವಂತೆ ಸೂಚಿಸಲಿಲ್ಲ. ಅವರದು ಲೋಕ ಸಂಗ್ರಹದ ವ್ರತ. ವ್ಯಾಸರಾಯರು ಕಟ್ಟಿದ ದಾಸಕೂಟದಲ್ಲಿ ಎಲ್ಲ ಜಾತಿಗಳವರೂ ಇದ್ದರು. ಹರಿದಾಸರ ಕೂಡದಲ್ಲಿ ಜಾತಿಗೆ, ಕುಲಕ್ಕೆ ಬೆಲೆಯಿಲ್ಲ ಎಂದರು. ಅದಕ್ಕಾಗಿಯೇ ಪುರಂದರದಾಸರು ಯಾವ ಕುಲವಾದರೇನು? ಆವನಾದರೇನು ಆತ್ಮಭಾವವರಿತ ಮೇಲೆ' ಎಂದು ಹಾಡಿದರು. ಸಂಸ್ಕೃತಕ್ಕೆ ಬದಲಾಗಿ ಜನಭಾಷೆ ಕನ್ನಡವನ್ನು ಬಳಸಿದ್ದು, ಮಂತ್ರಪೂಜೆಗೆ ಸಮಾನಾಂತರವಾಗಿ ಕನ್ನಡ ಸಂಕೀರ್ತನೆಗಳ ಪ್ರಯೋಗ ಮಾಡಿದ್ದು, ಹರಿಹರ ಅಭೇದವನ್ನು ಪ್ರತಿಪಾದಿಸಿದ್ದು ಧರ್ಮದೇವರನ್ನು ಮಠಮಂದಿರಗಳ ಗುಹೆಯಿಂದ ಬಯಲಿಗೆ ಜನಸಾಮಾನ್ಯರೆಡೆಗೆ ತಂದದ್ದು, ಆಧ್ಯಾತ್ಮಿಕತೆಯ ಕಟ್ಟಿನಿಂದ ಸಮಾಜಮುಖಿ ಚಿಂತನೆಗೆ ಹೊರಳಿದ್ದು. ದಾಸಪರಂಪರೆಯ ಇತ್ಯಾತ್ಮಕ ಅಂಶಗಳು ಧರ್ಮವನ್ನು ಕ್ಲಿಷ್ಟ ಆಚರಣೆಯಿಂದ ಸಾಹಿತ್ಯವನ್ನು ಸಂಸ್ಕೃತದ ಕೈಯಿಂದ ಬಿಡಿಸಿದ್ದು ದಾಸರು ಮಾಡಿದ ಬಹುದೊಡ್ಡ ಕ್ರಾಂತಿ. ಅದುವರೆಗೆ ಸಂಸ್ಕೃತ ಓದಬಾರದೆಂಬ ಕಟ್ಟು ನಿಟ್ಟಿನಲ್ಲಿ, ಓದಿನಿಂದ, ಜ್ಞಾನದಿಂದ ವಂಚಿತರಾಗಿದ್ದ ಜನಸಾಮಾನ್ಯರಿಗೆ, ಮಹಿಳೆಯರಿಗೆ ದಾಸ ಸಾಹಿತ್ಯ ತಂದುಕೊಟ್ಟ ಅನುಭವ ಅವರ ಬದುಕಿನ ಹೊಸ ವಿಸ್ತಾರವನ್ನು ತಂದುಕೊಟ್ಟಿತು. ಅವರ ಮೂಕತೆಗೆ ವಿರಾಮ ನೀಡಿ ಬಾಯಿ ಕೊಟ್ಟಿತು.

ಹರಿದಾಸರು ಕಟ್ಟಿಕೊಟ ಮೌಲ್ಯಗಳು ಕಾಲಾತೀತವಾಗಿ ಇಂದಿಗೂ ಪ್ರಸ್ತುತವಾಗಿದೆ. ಅವರ ಚಿಂತನೆಯಲ್ಲಿ ಎದ್ದು ಕಾಣುವ ಅಂಶ ಒಂದು ವಿಶಾಲ ಅರ್ಥದಲ್ಲಿ ಈ ಬದುಕನ್ನು ಭಗವಂತನನ್ನು ಗ್ರಹಿಸಿದ ಬಯಲಿಗೆ, ಧರ್ಮವನ್ನು ರಾಜಸತ್ತೆಯಿಂದ ಲೋಕದೆಡೆಗೆ ತಂದುದು ಈ ಪರ್ಯಾಯದ ಕಟ್ಟೋಣದಲ್ಲಿ ಅವರಿಗೆ ಅನೇಕ ತೆರನಾದ ಆತಂಕ, ಸಂಘರ್ಷಗಳು ಎದುರಾದುದುಂಟು ಕೊನೆಯಲ್ಲಿ ಸತ್ಯ ಕಂಡುದುಂಟು ದಾಸರ ಕಾರ್ಯಕ್ಷೇತ್ರ ಜನಸಾಮಾನ್ಯರ ನಡುವೆ ಬೇರೆ ಬೇರೆ ವೃತ್ತಿಗಳ ಮನೋಧರ್ಮಗಳ ಜನರೊಂದಿಗೆ ಬೆರೆತು ಮಾತಾಡುತ್ತಾ ಅವರವರ ವೃತ್ತಿ ಹವ್ಯಾಸಗಳಲ್ಲಿ ತೊಡಗಿರುತ್ತಲೇ ಭಕ್ತಿಯ ಹಿರಿಮೆಯನ್ನು ಮನಗಾಣಿಸಿದರು. ನಡೆದಾಡಬೇಕಾದ ದಾರಿಯನ್ನು ತಿಳಿಸಿದರು. ಜನಸಮುದಾಯದ ನಡುವೆ ಬದುಕಿದ ದಾಸರು ಸಮಾಜದ ಕಿಲುಬನ್ನು ತೊಳೆವ ಕೆಲಸವನ್ನು ಮಾಡಿದರು. ಸಾಮಾಜಿ–ಕ ದೌರ್ಬಲ್ಯ ದೋಷಗಳನ್ನು ಪ್ರಶ್ನಿಸುವ ಮೂಲಕ ಸಾಮಾಜಿಕವಾಗಿ ಸ್ಪಂದಿಸಿದರು. ಮನುಕುಲದ ಉತ್ಥಾನದ ಆಶಯದಲ್ಲಿ ದಾಸರು ಪ್ರಶ್ನೆಯನ್ನಷ್ಟೇ ಮಾಡಿ ಸುಮ್ಮನಾಗುವುದಿಲ್ಲ ಪರಿಹಾರವನ್ನು ಹೇಳುವ ಮೂಲಕ ಆ ಮಿತಿಯನ್ನು ದಾಟುವ ಬಗೆಯನ್ನು ಹೇಳುತ್ತಾರೆ.

ದಾಸರು ಸಾಚಾ ಸರಳ ಭಕ್ತಿಯ ಮಾರ್ಗ ತೋರಿದರು. ತಾವೂ ಆ ಮಾರ್ಗದಲ್ಲಿ ನಡೆದರು. ನಡೆನುಡಿಯಲ್ಲಿ ಒಂದಾದರು. ಅಂತರಂಗದ ಶುದ್ಧಿ ಇಲ್ಲದ ಜನ ಬೂಟಾಟಿಕೆಯ ಸೋಗಿನ ಭಕ್ತಿಯ ಪ್ರದರ್ಶನ ಮಾಡುವುದನ್ನು ದಾಸರು ಬಲವಾಗಿ ಖಂಡಿಸಿದರು. 'ಉದರ ವೈರಾಗ್ಯವಿದು ನಮ್ಮ ಪದುಮನಾಭವನಲಿ ಲೇಶ ಭಕುತಿಯಲ್ಲ' ಇಲ್ಲಿ ಡಾಂಭಿಕ ಭಕ್ತಿಯ ಬಗ್ಗೆ ವಿಡಂಬನೆಯಿದೆ. ಆ ಮೂಲಕ ಧ್ಯಾನ ಮೌನದ ಅಂತರಂಗದ ಪೂರ್ವಕವಾದ ಪೂಜೆಗೆ ಪ್ರಧಾನ್ಯವಿತ್ತಿದ್ದಾರೆ. 'ದಾಸರು ಆವ ಕುಲವಾದರೇನು ಆವನಾದರೇನು ಆತ್ಮಭಾವವರಿತ ಮೇಲೆ' ಎಂಬಲ್ಲಿ ವಿಶ್ವಮಾನವತೆಯನ್ನು ಎತ್ತಿಹಿಡಿದಿದ್ದಾರೆ. 'ಗಾತ್ರವೆ ಮಂದಿರ, ಹೃದಯವೆ ಮಂಟಪ, ನೇತ್ರವೆ ಮಹಾದೀಪ ಹಸ್ತಚಾಮರವು ಎಂದು ದೇಹವನ್ನೇ ದೇವಾಲಯವಾಗಿಸಿದರು. ಸತ್ಯವೆಂಬುದು ಸ್ನಾನ, ಉಪವಾಸ ಜಪನೇಮ' ವೆಂದು ಸಾರಿ ನಿರ್ಮಲ ಮನದ ಹರಿಸ್ಮರಣೆಯೊಂದಿದ್ದರೆ ಸಾಕು ದೈವ ಸಾಕ್ಷಾತ್ಕಾರಕ್ಕೆ ಎಂಬ ಸುಲಭದ ಬಾಗಿಲು ತೆರೆದರು. ಜಪವ ಮಾಡಿದರೇನು, ತಪವ ಮಾಡಿದರೇನು ಮನಶುದ್ಧಿ ಇಲ್ಲದನಕ; 'ಸುಮ್ಮನೆ ವೈಷ್ಣವ ನಂಬಿರಿ', 'ಓದುವುದು ವೇದ ಹಾಕುವುದು ಗಾಳ' ಮಂಡೆ ಬೋಳಾದರೇನು ಮನಶುದ್ಧಿಯಿಲ್ಲವು', 'ಚಿತ್ತಶುದ್ಧಿ ಇಲ್ಲದವ ಆವಜ್ಞಾನಿಯೇ', 'ತೀಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ', 'ನೇಮವಿಲ್ಲದ ಹೋಮವೇತಕಯ್ಯಾ' ಮೊದಲಾದ ಉದಾಹರಣೆಗಳಲ್ಲಿ ಅಂತರಂಗ ಬಹಿರಂಗದಲ್ಲಿ ನಡೆನುಡಿಗಳಲ್ಲಿ ಒಂದಾಗದ ಭಕ್ತಿಯನ್ನು ಲೇವಡಿ ಮಾಡುವ ಮೂಲಕ ಅಂತರಂಗ ಶುದ್ಧಿ ಶೌಚಕ್ಕೆ ಮಹತ್ವ ನೀಡಿದ್ದಾರೆ.

ಹರಿಸಾಯುಜ್ಯ ದಾಸರ ಮೂಲಭೂತ ಗುರಿಯಾಗಿದ್ದರೂ ಈ ಆಧ್ಯಾತ್ಮಿಕ ಗುಂಗಿನಲ್ಲಿ ಅವರು ಅಲೌಕಿಕದ ಸ್ವಿಕರಣೆ ಲೌಕಿಕದ ನಿರಾಕರಣೆ ಮಾಡಿಲ್ಲ. ಲೌಕಿಕದ ಬದುಕನ್ನು ಉತ್ತಮಿಸಿಕೊಳ್ಳುವಲ್ಲಿ ಜೀವನಮೌಲ್ಯವನ್ನು ರೂಢಿಸಿಕೊಳ್ಳುವಲ್ಲಿ ಶರೀರ ಅಥವಾ ಲೌಕಿಕದ ಅಸ್ಥಿರತೆಯ ಬಗೆಗೆ ಎಚ್ಚರಿಸಿದ್ದಾರೆ. ಅದರ ಜೊತೆಗೆ ಈ ಶರೀರ ಸಾಧನಾಶರೀರ ಎನ್ನುವುದನ್ನು ಒತ್ತಿ ಹೇಳಿದ್ದಾರೆ. 'ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ ಎಂದು ಈ ದೊಡ್ಡ ಬದುಕನ್ನು ಸಾರ್ಥಕ ಪಡಿಸಿಕೊಳ್ಳುವಂತೆ ಕರೆ ನೀಡಿದರು. ಅದನ್ನೇ ವಿಜಯದಾಸರು 'ಉತ್ತಮ ಜನುಮಕೆ ಬಂದೆನೊ' ಎಂದರು. ಪುರಂದರದಾಸರು ಈ ಸಂಸಾರವನ್ನು 'ಈಸಬೇಕು ಇದ್ದು ಜಯಿಸಬೇಕು' ಎಂದರು. 'ಬಲ್ಲವಗಿಲ್ಲಿದೆ ವೈಕುಂಠ' ಎನ್ನುವಲ್ಲಿ ಈ ಲೋಕವನ್ನೇ ನಾಕಮಾಗಿಸಿದ್ದಾರೆ. ಸಂಸಾರವೆಂಬಂಥ ಭಾಗ್ಯವಿರಲಿ, ಕಂಸಾರಿನೆನೆವೆಂಬ ಸೌಭಾಗ್ಯವಿರಲಿ ಎನ್ನುವಲ್ಲಿ ಲೌಕಿಕ ಬದುಕನ್ನು ಕರ್ಮಭೂಮಿಯಾಗಿ ಗ್ರಹಿಸಿದ ಗೌರವಭಾವವನ್ನು ಕಾಣಬಹುದು.

ಮಾನವ ಪ್ರೀತಿ ಪರಸ್ಪರ ಅರಿವು ಮೂಡಿಸುವ ದಿಕ್ಕಿನಲ್ಲಿ ಹರಿದಾಸ ಆಂದೋಲನ ಹೊಸ ಆಯಾಮವನ್ನು ತಂದುಕೊಟ್ಟಿತು. ಎಲ್ಲ ಮನುಷ್ಯ ಸಂಬಂಧವನ್ನು ಮಣ್ಣು ಮುಕ್ಕಿಸುವ ಪರಸ್ಪರ ದ್ವೇಷ ಹುಟ್ಟಿಸುವರ ದುಗ್ಗಾಣಿಯ ಬಗೆಗೆ ಅಂದು ದಾಸರಾಡಿದ ಮಾತುಗಳು ಹಣವೆ ಇಡಿಯ ಜಗತ್ತನ್ನು ಆಳುತ್ತಿರುವ ಈ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತತೆಯನ್ನು ಪಡೆದು ಅರ್ಥಪೂರ್ಣವೆನಿಸುತ್ತದೆ. ಮಾನವನಾಗಿಸುವ ಹಾಗೂ ಮಾನ ಹಸನಗೆಡಿಸುವ ಈ ಎರಡು ನೆಲೆಗಳಲ್ಲಿ ದುಗ್ಗಾಣಿ ಮಾಡುವ ಪವಾಡವನ್ನು ತೀಕ್ಷಣವಾಗಿ ಕಂಡಿಸಿದ್ದಾರೆ.

ಅನೇಕ ಸಾಮಾಜಿಕ ಧಾರ್ಮಿಕ ಅಂಧಶ್ರದ್ಧೆ ಮೂಢನಂಬಿಕೆಗಳನ್ನು ಪ್ರತಿಭಟಿಸುವಲ್ಲಿ ದಾಸರದು ಪ್ರಗತಿಪರ ಧೋರಣೆ, ಕ್ಷೀಣ ಶಾಸ್ತ್ರರ್ಥಗಳ ಪರಿಗ್ರಹಿಸುವ ಕುರಿಕೋಣಗಳ ತಲೆ ಚೆಂಡನಾಡಿ ಪ್ರಾಣಿ ಹತ್ಯವ ಮಾಳ್ಪುದಾವ ಸತ್ಕರ್ಮ ಎನ್ನುವಲ್ಲಿ ಪ್ರಾಣಿಬಲಿಯನ್ನು ಹಿಂಸಾಪ್ರವೃತಿಯನ್ನು ವಿರೋಧಿಸಿರುವರು. ದಾಸರು ಅನೇಕ ರಚನೆಗಳು ಅಂದಿನ ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತದೆ. ಹೆಣ್ಣಿನ ಶೀಲದ ಬಗೆಗೆ ದಾಸರು ಆಗಿಂದಾಗ್ಗೆ ಆಡುತ್ತಿರುವುದನ್ನು ಕಂಡರೆ ಮಧ್ಯಕಾಲೀನ ಸಮಾಜದಲ್ಲಿ ಹೆಣ್ಣಿಗೆ ಭಯಮುಕ್ತ ವಾತಾವರಣ ಇದಿಲ್ಲವೆಂದು ಕಾಣುತ್ತದೆ. ಅದಕ್ಕಾಗಿಯೇ ದಾಸರು 'ರಮಣನಿಲ್ಲದನಾರಿ ಪರರ ಕಣ್ಣಿಗೆ ಮಾರಿ', ತನ್ನ ಸತಿಯರೊಲುಮೆಗೊಲಿದು ತಾನು ಸುಖಿಸಬಾರದೆ', 'ನೋಡದಿರು ಪರಸ್ತ್ರೀಯರ' ಎಂದು ಪ್ರಶ್ನಿಸಿದ್ದಿರಬೇಕು. ವಿಜಯನಗರ ಕಾಲದ ಲೌಕಿಕ ಭೋಗದ ಸನ್ನಿವೇಶದಲ್ಲಿ ಬದುಕಿಬಾಳಿದ ಪುರಂದರದಾಸರು ಅದರ ನಶ್ವರತೆಯ ಕಡೆಗೆ ಎಚ್ಚರಿಸಿದ್ದಾರೆ. ಅದನ್ನೇ 'ಲೊಳಲೊಟ್ಟೆ ಎಲ್ಲಾ ಲೊಳ ಲೊಟ್ಟೆ' ಆನೆ ಕುದುರೆ ಒಂಟೆ ಲೊಳಲೊಟ್ಟೆ ಎಂದಿದ್ದಾರೆ. ದುಡಿಮೆಯನ್ನು ಮರೆತು ಅತ್ತೆಮಾವಂದಿರ ಮನೆಯಲ್ಲಿ ಸೋಮಾರಿಯಾಗಿ ದಿನಕಳೆವ ಮಂದಿಯನ್ನು ದಾಸರು ಟೀಕಿಸುವಲ್ಲಿನ ಅವರ ನಾಟಕೀಯ ಪ್ರತಿಭೆಯನ್ನು ಗಮನಿಸಬೇಕು ಮೊದಲ ದಿನ ಇತ್ತ ಬನ್ನಿ ಕುಳ್ಳಿರೆಂದು ಬಲು ಉಪಚರಿಸುವರು ಎನ್ನುವ ಒಂದು ವಾಸ್ತವವನ್ನು ಹೇಳಿ ಕೆಲವು ದಿನಗಳ ಬಳಿಕ ಅಷ್ಟಮಶನಿಯಿದು ಬಿಟ್ಟು ಹೋಗದು ನಮಗೆ ಅಳವಿಲ್ಲ ಎನ್ನುವ ಕಟು ವಾಸ್ತವವನ್ನು ನುಡಿವವರು. ಸಾಲ ಮಾಡಿ ಭೋಗ ಜೀವನವನ್ನು ಕೈಗೊಂಬವರಿಗೆ ದಾಸರು ಬಗೆ ಬಗೆಯ ನುಡಿಯೇಟನು ನೀಡಿದ್ದಾರೆ.

ಒಟ್ಟಿನಲ್ಲಿ 19 ನೇ ಶತಮಾನದಲ್ಲಿ ಬಂದ ಹರಿದಾಸರ ಪೀಳಿಗೆಯು ದ್ವೈತ ಸಿದ್ಧಾಂತದ ಅಡಿಪಾಯದ ಮೇಲೆ 'ಭಕ್ತಿ' ಯ ಸುಂದರ ಸೌಧವನ್ನು ನಿರ್ಮಿಸಿ ಆಕರ್ಷಕವಾಗಿಸಿದರು. ಸರಳ, ಸುಂದರ ಮತ್ತು ಸಂಗೀತದ ಮಾಧುರ್ಯದ ಮೂಲಕ 'ಭಕ್ತಿ' ಸಾಹಿತ್ಯಕ್ಕೆ ಹೊಸ ಮೆರಗನ್ನು ಕೊಟ್ಟರು. ಸಂಸಾರದಲ್ಲಿದೇ ಸಂಸಾರವೆಂದರೆ ಏನೆಂಬುದನ್ನು ಅರಿತುಕೊಂಡ ಚಾಣಾಕ್ಷಮತಿಗಳು ಹರಿದಾಸರು ಲೌಕಿಕದಲ್ಲಿದ್ದೂ ಇಲ್ಲದಂತೆ ಬಾಳಿದ ರೀತಿ ನಿರ್ಲಿಪ್ತ ಬದುಕಿದ ಸಂಕೇತವೇ ಸರಿ. ಬದುಕನ್ನು ವಾಸ್ತವವಾಗಿ ಅನುಭವಿಸುತ್ತಲೇ ಅದರಲ್ಲಿರುವ ಸಮಸ್ಯೆಗಳನ್ನು ಕಂಡುಕೊಂಡು ಅವುಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಇವರದು. ಭಾರತದ ಪ್ರತಿಯೊಂದು ವ್ಯವಸ್ಥೆಯು ಸಮಾಜದಲ್ಲಿ ಮಾಡಿದ ಗಾಡಪರಿಣಾಮ ಹೇಳತೀರದು. ಮನುಷ್ಯನ ಸ್ವಾರ್ಥಪರತೆ, ಧಾರ್ಮಿಕ ಅಂದಾನುಕರಣೆ, ಆರ್ಥಿಕ ಅಸಮತೋಲನ, ಅಧಿಕಾರ–ಅಂತಸ್ತುಗಳಲ್ಲಿ ಭಿನ್ನತೆ, ದುಡಿಮೆಯಲ್ಲಿ ಕೆಳಮಟ್ಟದ ಯೋಜನೆ, ಸ್ವಾತಂತ್ರ್ಯದ ಹೆಸರಿನಲ್ಲಿ ಅಭಿವ್ಯಕ್ತಿರಣ ಮುಡನಂಬಿಕೆ ಅಂ–ಧಶ್ರದ್ಧಾಚರಣೆಗಳು, ಗೂಡು ಸಂಪ್ರದಾಯಗಳ ಮೂಲಕ ಜನರ ಮನಸ್ಸಿನಲ್ಲಿ ಜಿಡ್ಡುಗಟ್ಟಿದ ವ್ಯವಸ್ಥೆಯನ್ನು ಮಾಡಿದರು. ಈ ಎಲ್ಲಾ ಅಂಶಗಳಿಗೆ ಬೆಳಕಾಗಿ ಬಂದರು. ಇವನ್ನೆಲ್ಲಾ ಹೋಗಲಾಡಿಸಲು ಶ್ರಮಿಸಿದರು. ಮನುಷ್ಯನು ನಡೆ–ನುಡಿ–ಶೀಲ–ಚಾರಿತ್ರ್ಯ ಹೊಂದುವಂತೆ ಮಾಡಿದರು. ಪಂಪನು 'ಮಾನವ ಕುಲಂ ತಾನೊಂದೆವಲಂ' ಅಂದ. ಕೀರ್ತನೆಕಾರ ಕನಕದಾಸರು 'ಕುಲಕುಲವೆಂದು ಹೊಡೆದಾಡದಿರಿ' ಎಂದು ಇವ–ರಿಬ್ಬರ ಸಮತೆಯ ಮಧ್ಯ ಬೆಸುಗೆಯಾಗಿ ದಾಸರು ಸಾಮಾಜಿಕ ಸಾಮರಸ್ಯವನ್ನು ತಮ್ಮ ಅನುಭಾವದ ಮೂಲಕ ಹೇಳುತ್ತ ಅನುಭಾವವು ವೈಚಾರಿಕ ಪ್ರಜ್ಞೆಯಿಂದ ಕೂಡಿದ್ದೆಂದು ಸಾಬೀತು ಮಾಡಿದರು. ದಾಸರ ಈ ಸಾಮಾಜಿಕ ನಿಲುವು ನಮಗೆ ಇಂದಿಗೂ ಪ್ರಸ್ತುತವಾಗುತ್ತದೆ.

**ಆಧಾರ ಗ್ರಂಥಗಳು**

1) ಈಸಬೇಕು ಇದು ಜಯಿಸಬೇಕು – ಪ್ರೊ.ಎ.ನಾವಡ
2) ದಾಸ ಸಾಹಿತ್ಯದಲ್ಲಿ ಜನಪರ ಅಂಶಗಳು – ಡಾ.ಆರ್.ಸುನಂದಮ್ಮ
3) ದಾಸ ಸಾಹಿತ್ಯ ಭಾಷೆ – ಎಸ್.ಎಸ್.ಅಂಗಡಿ